ಗ್ರಾಮ ಪಂಚಾಯತಿ ಅಧೀನದಲ್ಲಿರುವ ಕಿರುನೀರು ಸರಬರಾಜು ಯೋಜನೆಯನ್ನು ಜಿಲ್ಲಾ ಪಂಚಾಯ್ತಿಗೆ ವಹಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 177(585)

**ಸದಸ್ಯರ ಹೆಸರು: ಶ್ರೀ ಅಪ್ಪಚ್ಚುರಂಜನ್ ಎಂ.ಪಿ.(ಸೋಮವಾರಪೇಟೆ)**

**ಉತ್ತರಿಸುವ ಸಚಿವರು: ಶ್ರೀ ಎಂ.ಸೈ.ಇನಾಂದಾರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)**

## ಪ್ರಶ್ನೆ

ಅ. ಗ್ರಾಮ ಪಂಚಾಯತ್ ಅಧೀನದಲ್ಲಿರುವ ಕಿರುನೀರು ಸರಬರಾಜು ಯೋಜನೆಯನ್ನು ಜಿಲ್ಲಾ ಪಂಚಾಯತಿಗೆ ವಹಿಸಿಕೊಡುವ ವಿಷಯ ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ?

ಆ. ರಾಜ್ಯದಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯತಿ ಸದಸ್ಯರಿಗೆ ಯಾವ ಮಾನದಂಡದ ಆಧಾರದ ಮೇಲೆ ದಿನಭತ್ಯೆ ನಿಗದಿಪಡಿಸಲಾಗಿದೆ (ವಿವರ ನೀಡುವುದು)?

ಇ. ಗ್ರಾಮ ಪಂಚಾಯತಿ ಸದಸ್ಯರಿಗೆ ಕೊಡುತ್ತಿರುವ ದಿನಭತ್ಯೆಯು ಕಡಿಮೆಯಾಗಿರುವುದರಿಂದ ಇದನ್ನು ಹೆಚ್ಚಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ?

## ಉತ್ತರ

ಅ. ಇಲ್ಲ.

ಆ. ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯರುಗಳಿಗೆ ಯಾವುದೇ ದಿನಭತ್ಯೆಯನ್ನು ನಿಗಧಿಪಡಿಸಿರುವುದಿಲ್ಲ.

ಇ. ಉದ್ಭವಿಸುವುದಿಲ್ಲ.

ತೀರ್ಥಹಳ್ಳಿ ತಾಲ್ಲೂಕ ಹಣಗೆರೆ ಪಂಚಾಯ್ತಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 178(685)

**ಸದಸ್ಯರ ಹೆಸರು: ಶ್ರೀ ಅರಗ ಜ್ಞಾನೇಂದ್ರ(ತೀರ್ಥಹಳ್ಳಿ)**

**ಉತ್ತರಿಸುವ ಸಚಿವರು: ಮಾನ್ಯ ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)**

## ಪ್ರಶ್ನೆ

1. ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕ್ ಹಣಗೆರೆ ಪಂಚಾಯತಿ ಅಧ್ಯಕ್ಷ ಸ್ಥಾನ ಖಾಲಿ ಇರುವುದು ಸರ್ಕಾರದ ಗಮನದಲ್ಲಿದೆಯೇ; ಹಾಗಿದ್ದಲ್ಲಿ ಎಷ್ಟು ಸಮಯದಿಂದ ಖಾಲಿ ಇದೆ?

2. ನಿಯಮಾವಳಿಯಂತೆ ಸ್ಥಾನ ಖಾಲಿಯಾದ ಎಷ್ಟು ಸಮಯದಲ್ಲಿ ಚುನಾವಣೆ ನಡೆಸಬೇಕು; ಸಮಯಕ್ಕೆ ಸರಿಯಾಗಿ ನಡೆಸದೆ ವಿಳಂಬವಾಗಲು ಕಾರಣಗಳೇನು?

3. ಸದರಿ ಪಂಚಾಯತಿ ಚುನಾವಣೆ ನಡೆಸಲು ವಿಳಂಬ ಮಾಡಿದ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಕೈಗೊಳ್ಳುವುದೆ?

4. ಈ ಚುನಾವಣೆಯನ್ನು ಎಂದು ನಡೆಸಲಾಗುವುದು?

## ಉತ್ತರ

1. ತೀರ್ಥಹಳ್ಳಿ ತಾಃಹಣಗೆರೆ ಗ್ರಾ.ಪಂ.ಅಧ್ಯಕ್ಷರ ಹುದ್ದೆಯನ್ನು ತಾ:18-6-2001 ರಂದು ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸದರಿ ಹುದ್ದೆಯು ಅವಿಶ್ವಾಸ ನಿರ್ಣಯದ ಆಧಾರದ ಮೇಲೆ ಖಾಲಿ ಇರುತ್ತದೆ. ತದನಂತರ ಉಪ ವಿಭಾಗಾಧಿಕಾರಿಗಳ ಆದೇಶದಂತೆ ಸದರಿ ಗ್ರಾಮ ಪಂಚಾಯತಿಯ ಉಪಾಧ್ಯಕ್ಷರನ್ನು ಪ್ರಭಾರ ಅಧ್ಯಕ್ಷರ ಸ್ಥಾನವನ್ನು ವಹಿಸಿಕೊಂಡಿರುತ್ತಾರೆ.

2. ಅಧ್ಯಕ್ಷ:ಉಪಾಧ್ಯಕ್ಷರ ಪದದಲ್ಲಿ ಖಾಲಿ ಸ್ಥಾನ ಉಂಟಾದಾಗ, ಸಂಬಂಧಿಸಿದ ಗ್ರಾಮಪಂಚಾಯತ್ ಕಾರ್ಯದರ್ಶಿಯವರು ಸ್ಥಾನ ಖಾಲಿಯಾದ ದಿನಾಂಕದಿಂದ 7 ದಿನಗಳ ಒಳಗಾಗಿ ಸಂಬಂಧಿಸಿದ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಮತ್ತು ಗೊತ್ತುಪಡಿಸಿದ ಅಧಿಕಾರಿಗಳಿಗೆ, ನಮೂನೆ-3ರಲ್ಲಿ ನೋಟೀಸನ್ನು ನೀಡತಕ್ಕದ್ದು ನಂತರ (ಅಧ್ಯಕ್ಷ ಅಥವಾ ಸಂದರ್ಭಾನುಸಾರ ಉಪಾಧ್ಯಕ್ಷರ ಚುನಾವಣೆಗಾಗಿ ಉಪಬಂಧಿಸಿದ ರೀತಿಯಲ್ಲಿ ಕ್ರಮ ಕೈಗೊಳ್ಳತಕ್ಕದ್ದು ಎಂದು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆ)

ನಿಯಮಾವಳಿಗಳು 1995ರಲ್ಲಿ ನಿಗಧಿಗೊಳಿಸಲಾಗಿದೆ. ಸಿಬ್ಬಂದಿವರ್ಗಕ್ಕೆ ಸರಿಯಾದ ಮಾಹಿತಿ ಇಲ್ಲದೆ ವಿಳಂಬವಾಗಿರುತ್ತದೆ.)

3. ಅಧ್ಯಕ್ಷರ ಚುನಾವಣೆಯನ್ನು ನಡೆಸಲು ವಿಳಂಬ ಮಾಡಿರುವ ಗ್ರಾಮಪಂಚಾಯತ್ ಕಾರ್ಯದರ್ಶಿ ಹಾಗೂ ಪಂಚಾಯತ್ ವಿಸ್ತರಣಾಧಿಕಾರಿಗಳ ಬಗ್ಗೆ ಈಗಾಗಲೇ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ವರದಿ ಸಲ್ಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಕೋರಲಾಗಿದೆ.

4. ದಿನಾಂಕ 30-1-2002ರಂದು ಈ ಚುನಾವಣೆಯನ್ನು ನಡೆಸಲಾಗುವುದು.

ಜಿಲ್ಲಾ ಪಂಚಾಯತ್‌ಗಳಲ್ಲಿ ಶಾಸಕರ ಸ್ಥಾನಮಾನ ಮತ್ತು ಹೊಣೆಗಾರಿಕೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 179(366)

**ಸದಸ್ಯರ ಹೆಸರು: ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ)**

**ಉತ್ತರಿಸುವ ಸಚಿವರು: ಶ್ರೀ ಎಂ.ವೈ.ಘೋರ್ಪಡೆ(ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)**

## ಪ್ರಶ್ನೆ

1. ಶಾಸಕರು ಜಿಲ್ಲಾ ಪಂಚಾಯತ್‌ನ ಪದನಿಮಿತ್ತ ಸದಸ್ಯರಾಗಿದ್ದಾರೆಯೇ?

2. ಜಿಲ್ಲಾ ಪಂಚಾಯತ್‌ನಲ್ಲಿ ಅವರ ಸ್ಥಾನಮಾನಗಳು, ಹೊಣೆಗಾರಿಕೆ ಹಾಗೂ ಕರ್ತವ್ಯಗಳೇನು?

3. ಹೊಣೆಗಾರಿಕೆ ಮತ್ತು ಕರ್ತವ್ಯ ಇದ್ದಲ್ಲಿ ಅದರ ವ್ಯಾಪ್ತಿಯೇನು?

## ಉತ್ತರ

1. ಹೌದು. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 159(ii)(iii) ರನ್ವಯ ಶಾಸಕರು ಜಿಲ್ಲಾ ಪಂಚಾಯತ್‌ನ ಪದನಿಮಿತ್ತ ಸದಸ್ಯರಾಗಿರುತ್ತಾರೆ.

2. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 159ರಲ್ಲಿ ತಿಳಿಸಿರುವಂತೆ ಜಿಲ್ಲಾ ಪಂಚಾಯತ್‌ನ ಇತರೆ ಸದಸ್ಯರುಗಳಿಗೆ ಇರುವ ಸ್ಥಾನಮಾನಗಳು, ಹೊಣೆಗಾರಿಕೆ ಹಾಗೂ ಕರ್ತವ್ಯಗಳು ಸದಸ್ಯರುಗಳಾದ ಶಾಸಕರುಗಳಿಗೂ ಸಹ